

ಮುಡಿದ ಗುಲಾಬಿಯಿತ್ತು. ಬಿಸಿಲು ಅವಳ ಕಿವಿಯೋಲೆಯ ಮೇಲೆ ಬಿದ್ದು ಆಗಾಗ ಫಳಕ್ಕನೆ ಹೊಳೆಯುತ್ತಿತ್ತು. ಕೊರಳಲ್ಲಿದ್ದ ಸರವನ್ನವಳು ಆಟ ಆಡುವಂತೆ ಎಳೆದೆಳೆದು ಬಿಡುತ್ತಿದ್ದಳು. ಹಣೆಯ ಮಧ್ಯೆದ ತಿಳಿನೀಲಿ ಬಿಂದಿ ಅವಳಷ್ಟೇ ಚಂದದಲ್ಲಿ ಮುಗುಳ್ನಗುತ್ತಿತ್ತು.

'ನಿಜ... ಬಚ್ಚಿಟ್ಟದ್ದೆಲ್ಲವೂ ದುಪ್ಪಟ್ಟಾಗಿ ನಮ್ಮನ್ನು ಕಾಡುತ್ತವೆ. ಹಸಿವು, ನಿದ್ರೆ, ಸೌಂದರ್ಯ ಹಾಗೂ ಕಾಮ...'

ಎತ್ತಲೋ ನೋಡುತ್ತಾ ಹಾಗೆಂದಿದ್ದ ಶ್ರೀಮುಖ.

'ಹಾಗಾದರೆ ಪ್ರೀತಿ?'

ಥಟ್ಟನೆ ಅವನ ಕಣ್ಣುಗಳನ್ನೇ ನೋಡುತ್ತ ಕೇಳಿದ್ದಳು ಮನೋಹರಿ. ಅವನೂ ಥಟ್ಟನೆ ಅವಳತ್ತ ನೋಡಿದ್ದ. ಬೆವರಿನ ಹನಿಯೊಂದು ಅವಳ ಹಣೆಯಿಂದಿಳಿದು ಗಲ್ಲದ ಕಡೆಗೆ ಪಯಣ ಹೊರಟಿತ್ತು. ಅದನ್ನೊಮ್ಮೆ ಮೃದುವಾಗಿ ಒರೆಸಬೇಕು ಎನ್ನುವ ಭಾವನೆಯನ್ನು ಬಲವಂತವಾಗಿ ತನ್ನಲ್ಲೇ ಹಿಡಿದಿಟ್ಟುಕೊಂಡ ಶ್ರೀಮುಖ. ನಡೆಯುತ್ತಾ ನಡೆಯುತ್ತಾ ಅವರಿಬ್ಬರೂ ಪಾಳು ದೇಗುಲವೊಂದರ ಪ್ರಾಂಗಣ ತಲುಪಿದ್ದರು. ದೇವರೇ ಎದ್ದು ಹೋಗಿರುವ ಅಲ್ಲೀಗ ಕಲ್ಲಿನ ಗಟ್ಟಿಮುಟ್ಟಾದ ಗರ್ಭಗುಡಿಯೊಂದೇ ನೆಟ್ಟಗೆ ನಿಂತಿತ್ತು. ಖಾಲಿಯಿರುವ ಅದರೊಳಗೆ ಬಗ್ಗಿ ನೋಡಿದವರಿಗೆ ಇನ್ನಾದರೂ